**ದಿನಾಂಕಃ 09.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ. ಆರ್.ಎನ್. ವಕೀಲರಿಂದ**

ಅರ್ಜಿದಾರ ನಮ್ಮ ಸಂಸ್ಥೆಯಿಂದ ಪಡೆದ ಪರಿಹಾರ ಮೊತ್ತ ಅಂತಿಮ ಪರಿಹಾರದ ಮೊತ್ತವಾಗಿರುತ್ತದೆ ಎನ್ನುವ ಯಾವುದೇ ದಾಖಲೆಯನ್ನು ಬರೆದು ನೀಡಿರುವುದಿಲ್ಲ ಎಂದರೆ ಸರಿ. ನಿ.ಆರ್.2 ಜಿಲ್ಲಾಧಿಕಾರಿಯವರ ಆದೇಶಕ್ಕೆ ಅರ್ಜಿದಾರ ತಾನು ಬದ್ದನಾಗಿದ್ದೇನೆ ಎನ್ನುವ ಯಾವುದೇ ದಾಖಲೆಯನ್ನು ಸಹ ನಮಗೆ ಬರೆದು ನೀಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ನಮ್ಮ ಸಂಸ್ಥೆ ರೂ.11,91,791/ ರೂಪಾಯಿ ಹಣವನ್ನು ನೀಡಿರುವುದಿಲ್ಲ ಆದರೂ ಸಹ ನಾವು ಸದರಿ ಮೊತ್ತವನ್ನು ನೀಡಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ನಾವು ಕೇವಲ ರೂ.67,000/ ರೂಪಾಯಿ ಹಣವನ್ನು ಮಾತ್ರ ನಾವು ಪಾವತಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಹಾಜರು ಪಡಿಸಿರುವ ದಾಖಲೆಗಳಲ್ಲಿ ಅರ್ಜಿದಾರ ಕಂಬಣ್ಣನಲ್ಲದೇ ಬೇರೆಯವರಿಗೆ ಸೇರಿದ ದಾಖಲೆಗಳು ಇರುತ್ತವೆ ಎಂದರೆ ಸರಿ, ಎಕೆಂದರೆ ಒಂದೇ ಸರ್ವೆ ನಂಬರ್ ಗೆ ಸೇರಿದ್ದಾಗಿರುತ್ತದೆ ಮತ್ತು ಅವರುಗಳು ಅಣ್ಣ ತಮ್ಮಂದಿರುಗಳಾಗಿರುತ್ತಾರೆ. ಅವರು ಅಣ್ಣ ತಮ್ಮಂದಿರು ಎಂದು ತೋರಿಸುವ ದಾಖಲೆಗಳು ಹಾಜರುಪಡಿಸಬಹುದು. ಅರ್ಜಿದಾರರಿಗೆ ಸಂಬಂಧಿಸಿದ ಶೇಂಗಾ ಬೆಳೆ ಒಂದು ಎಕರೆಯಲ್ಲಿ ಇದ್ದು , 3 ಹೊಂಗೆ ಮರಗಳು ಇದ್ದು ಅದನ್ನು ತೆರವು ಗೊಳಿಸಲಾಗಿದೆ ಎಂದರೆ ಸರಿ. ಅರ್ಜಿದಾರನ ಜಮೀನಿನಲ್ಲಿ ಬೆಳೆದ ಬೆಳೆಯ ವಿಸ್ತೀರ್ಣಕ್ಕೆ ಅನುಗುಣವಾಗಿ ಸದರಿ ಪರಿಹಾರ

ಮೊತ್ತವನ್ನು ನಾವು ನೀಡಿದ್ದೇವೆ. ಸದರಿ ಹಣವನ್ನು ಸರ್ಕಾರದ ಯಾವುದೇ ಆದೇಶದ ಪ್ರಕಾರ ನಾವು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರೂ.67,960/ ಮತ್ತು 35,000/ ಹಣವನ್ನು ನಾವು ಸರ್ಕಾರದ ಗೈಡ್ ಲೈನ್ಸ್ ಪ್ರಕಾರ ನೀಡಿದ್ದೇವೆ. ಈಗ ಸಾಕ್ಷಿಗೆ ಒಂದು ಗೈಡ್ ಲೈನ್ಸ್ ನ ಚಾಯಾ ಪ್ರತಿಯನ್ನು ತೋರಿಸುತ್ತಿದ್ದು ಅದನ್ನು ಒಪ್ಪಿಕೊಂಡಿದ್ದು ಸದರಿ ಗೈಡ್ ಲೈನ್ ಅನ್ನು ನಿ.ಪಿ.4 ಎಂದು ಗುರುತಿಸಲಾಯಿತು. ನಿ.ಪಿ.4 ರ ಪ್ರಕಾರ ನಾವು ಪರಿಹಾರ ನೀಡಿರುತ್ತೇವೆ ಎಂದರೆ ಸರಿ. ಸದರಿ ಕಾರಿಡಾರ್ ನ ಉದ್ದ 41.67 ಮೀಟರ್ ಮತ್ತು ಅಗಲ 33 ಮೀಟರ್ ಆಗಿದೆ. ಸದರಿ ಕಾರಿಡಾರ್ ನ ಅಗಲ 33 ಮೀಟರ್ ಆಗಿದೆ ಎನ್ನುವ ಬಗ್ಗೆ ನಾವು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಬಲ್ಲೆ. ಸೆಂಟ್ರಲ್ ಗೌರ್ನಮೆಂಟ್ ನ ಗೈಡ್ ಲೈನ್ಸ್ ಪ್ರಕಾರ ಕಾರಿಡಾರ್ ನ ಅಗಲ 67 ಮೀಟರ್ ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.4 ರ ಪ್ರಕಾರ ಕಾರಿಡಾರ್ ಗೆ ಪರಿಹಾರದ ಮೊತ್ತವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.4 ರ ಪ್ರಕಾರ 34x41.67 ಮೀಟರ್ ವಿಸ್ತೀರ್ಣಕ್ಕೆ ಪರಿಹಾರ ನೀಡಬೇಕು ಎಂದರೆ ಸರಿಯಲ್ಲ.

ನಿ.ಆರ್.5 ಮತ್ತು 6 ರಲ್ಲಿ ಇರುವ ಎಲ್ಲಾ ಚೆಕ್ಕುಗಳನ್ನು ನಾವು ಅರ್ಜಿದಾರರಿಗೆ ನೀಡಿರುವುದಿಲ್ಲ, ಅವುಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪರಿಹಾರ ಮೊತ್ತವನ್ನು ನೀಡುವ ಸಮಯದಲ್ಲಿ ಫಲಾನುಭವಿಗಳ ಬ್ಯಾಂಕ್ ಡೀಟೇಲ್ಸ್ ಗಳನ್ನು ಪಡೆದುಕೊಂಡು ಅಕೌಂಟ್‌ಪೇಯಿ ಮುಖಾಂತರ ಸದರಿಯವರಿಗೆ ನಾವು

ಆರ್.ಡಬ್ಲ್ಯೂ. 1

ಪರಿಹಾರದ ಮೊತ್ತವನ್ನು ನೀಡುತ್ತೇವೆ. ದಾಖಲೆಯನ್ನು ನಮ್ಮ ಅನುಕೂಲಕ್ಕೋಸ್ಕರ ನಾವು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನೋಟೀಸುಗಳನ್ನು ನಾವು ಅರ್ಜಿದಾರನ ಜಮೀನಿನಲ್ಲಿ ಲೈನು ಎಳೆಯುವ ಸಮಯದಲ್ಲಿ ನೀಡಲಿಲ್ಲಾ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಯಾವುದೇ ದಾಖಲೆಗಳನ್ನು ನಾವು ಅರ್ಜಿದಾರನ ಜಮೀನಿನಲ್ಲಿ ಲೈನು ಎಳೆಯುವ ಸಮಯದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಆರ್.5 ಮತ್ತು 6 ಚೆಕ್ಕು ಗಳನ್ನು ಬಿಟ್ಟು ಉಳಿದ ಹಣ ಅರ್ಜಿದಾರರಿಗೆ ಸರಾಯ ಆಗಿಲ್ಲ ಎಂದರೆ ಸರಿಯಲ್ಲ. ಶೇಗಾ ಬೆಳೆ ಮತ್ತು ಹೊಂಗೆ ಮರದ ಸಂಬಂಧ ಪಟ್ಟ ಇಲಾಖೆಯಿಂದ ಮೌಲ್ಯ ಮಾಪನ ಮಾಡಿಸಿಲ್ಲ ಆದರೆ ಗೈಡ್ ಲೈನ್ ಪ್ರಕಾರ ಪರಿಹಾರ ನೀಡಿರುತ್ತೇವೆ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು

**ಆರ್.ಡಬ್ಲ್ಯೂ. 1**